

# ಬುಟ್ಟೆ ಬದುಕಿನ ಹಾಸ್ಯದ ಬುತ್ತಿ

■ ಪ್ರಭು ಬ. ಅಡವಿಹಾಳ

ಪತ್ನಿ: 'ನಮ್ಮ ಲಗ್ನ ಆಗಿ 10 ವರ್ಷವಾಯ್ತು. ಮಂದಿ ಕೇಳ್ತಾ ಇರ್ತಾರೆ. 10 ವರ್ಷವಾದ್ರೂಬಿ ಹೆಂಗ್ ಖುಷಿ ಇದೀರಿ ಅಂತ'.

ಪತಿ: 'ಅದನ್ನ ನಾ ಹೇಳ್ತೀನ್ರಿ'.

ತಕ್ಷಣ ಗಂಡನ ತಲೆ ಮೇಲೆ ತಟ್ಟುವ ಪತ್ನಿ. 'ನಾ ಹೇಳಾಕತ್ತೀನಿಲ್ಲ, ಸುಮ್ ಕುಂದ್ರು ಬಾಯಿ ಮುಚ್ಕೊಂಡು' ಎಂದು ಗದರುತ್ತಾಳೆ. ಇವರ ಸಂಸಾರದ ಖುಷಿಯ ಗುಟ್ಟು ಸಹಜವಾಗಿಯೇ ಪ್ರೇಕ್ಷಕರಿಗೆ ಅರ್ಥವಾಗಿರುತ್ತದೆ. ತುಟಿಯ ಮೇಲೊಂದು ಕಿರುನಗೆ ಮೂಡಿಸಿರುತ್ತದೆ.

ಹೀಗೆ ಪತ್ನಿ ಕೈಯಲ್ಲಿ ಪ್ರೇಕ್ಷಕರಿಗಾಗಿ ಏಟು ತಿನ್ನುತ್ತಾ ನಕ್ಕು ನಲಿಸುವ ಮಹಾಂತೇಶ ಬುಟ್ಟೆ ಮೂಲತಃ ಕಲಬುರಗಿಯವರು. ಓಂನಗರದ ನಿವಾಸಿಯಾಗಿರುವ ಮಹಾಂತೇಶ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಡಿಪ್ಲೊಮೊ ಪದವೀಧರ. ಬೆಂಗಳೂರಿನ ಡೆಲ್ ಕಂಪನಿಯಲ್ಲಿ ಹಾರ್ಡ್‌ವೇರ್ ಎಂಜಿನಿಯರ್ ಆಗಿದ್ದ ಇವರು ಸಂಬಳಕ್ಕಿಂತ ಸ್ವಉದ್ಯೋಗವೇ ಮೇಲು ಎಂದು ಕಲಬುರಗಿಯಲ್ಲೇ ತಂದೆ ಶರಣಪ್ಪ ನಡೆಸುತ್ತಿದ್ದ ಟಿಫನ್ ಸೆಂಟರ್ ನೋಡಿಕೊಳ್ಳುತ್ತಿದ್ದಾರೆ.

2015ರ ಜ.22ರಂದು ಪ್ರಭಾವತಿ ಅವರನ್ನು ಮದುವೆಯಾದ ಇವರು ಕೊರೊನಾ ಲಾಕ್‌ಡೌನ್‌ನಲ್ಲಿ ಸಮಯದ ಸದ್ವಿನಿಯೋಗಕ್ಕಾಗಿ ರೀಲ್ಸ್ ಶುರು ಮಾಡಿದರು. ಅದೀಗ ಇವರ ಹವ್ಯಾಸವಾಗಿ ಬೆಳೆದಿದ್ದು, ರಾಜ್ಯದ ಮೂಲೆ ಮೂಲೆಗೂ 'ಉತ್ತರ ಕರ್ನಾಟಕದ ಗಂಡ ಹೆಂಡತಿ'ಯನ್ನು ಪರಿಚಯಿಸಿದೆ.

ಕಲಬುರಗಿಯ ಗಾಜಿಪುರದಲ್ಲಿ ಶ್ರೀಸಾಯಿ ಫಾಸ್ಟ್ ಫುಡ್ ಅಂಡ್ ಟಿಫನ್ ಸೆಂಟರ್ ಹೊಂದಿರುವ ಇವರು, ಸಂಜೆ ಓಂನಗರದಲ್ಲೇ ಭಜಿ, ಬೇಲ್‌ಪುರಿಯಂತಹ ತಿಂಡಿಯನ್ನೂ ಮಾರಾಟ ಮಾಡುತ್ತಾರೆ. ಹೀಗಾಗಿ ಸದಾ ಹೋಟೆಲ್ ಕೆಲಸದಲ್ಲೇ ಬ್ಯುಸಿಯಾಗಿರುವ ಕಾರಣ ಸಿಗುವ ಅಲ್ಪ ಸಮಯದಲ್ಲೇ ಜನರನ್ನು ನಗಿಸುವ ಪ್ರಯತ್ನ ಮಾಡುತ್ತಾರೆ.

'ಇಂದಿನ ಒತ್ತಡದ ಬದುಕಿನಲ್ಲಿ ಜನ ನಗುವುದನ್ನೇ ಮರೆತಿದ್ದಾರೆ. ಹೀಗಾಗಿ ನಾವು ಜನರನ್ನು ನಗಿಸುವುದಕ್ಕಾಗಿ ವಿಡಿಯೊ ಮಾಡುತ್ತೇವೆ. ಯಾವುದೇ ಕ್ಯಾಮೆರಾ ಇಲ್ಲ. ಮೊಬೈಲ್‌ನಲ್ಲೇ ವಿಡಿಯೊ ಮಾಡಿ ಅಪ್‌ಲೋಡ್ ಮಾಡುತ್ತೇವೆ. ಯ್ಯೂಟೂಬ್‌ನಿಂದ ಆದಾಯ ಇದ್ದರೂ, ನನಗೆ ಟಿಫನ್ ಸೆಂಟರ್ ಕೆಲಸವೇ ಮುಖ್ಯ. ಧಾರಾವಾಹಿಯ ಆಫರ್ ಬಂದರೂ ನಿರಾಕರಿಸಿದ್ದೇನೆ. ಇರುವ ಕೆಲಸದಲ್ಲೇ ಖುಷಿಯಾಗಿದ್ದೇನೆ' ಎನ್ನುತ್ತಾರೆ ಮಹಾಂತೇಶ.

ಈವರೆಗೂ ಒಂದೂವರೆ ಸಾವಿರಕ್ಕೂ ಅಧಿಕ ವಿಡಿಯೊ ಮಾಡಿರುವ ದಂಪತಿ, 'ಉತ್ತರ ಕರ್ನಾಟಕದ ಗಂಡ ಹೆಂಡತಿ' ತಮ್ಮ ಯೂಟ್ಯೂಬ್‌ಗೆ ಹೆಸರು ಕೊಟ್ಟಿದ್ದು, ಬುಟ್ಟೆ ದಂಪತಿ ಹಾಸ್ಯದ ಬುತ್ತಿಯನ್ನು ರಾಜ್ಯದ ಜನತೆಗೆಲ್ಲಾ ಉಣಬಡಿಸುವುದಷ್ಟೇ' ನಮ್ಮ ಉದ್ದೇಶ ಎಂದು ಸ್ಪಷ್ಟಪಡಿಸುತ್ತಾರೆ.

'ಯ್ಯೂಟೂಬ್‌ಗೆ ಕನಿಷ್ಠ 3 ನಿಮಿಷದ ವಿಡಿಯೊ ಬೇಕು. ಅದಕ್ಕೆ ಉತ್ತಮ ವಿಷಯದ ಜತೆಗೆ ಟೀಂವರ್ಕ್ ತುಂಬಾ ಮುಖ್ಯ. ಟಿಫನ್ ಸೆಂಟರ್‌ಗಾಗಿ ಬೆಳಿಗ್ಗೆ 4ರಿಂದಲೇ ಕೆಲಸ ಶುರುಮಾಡುವ ನಾವು, ಮಧ್ಯಾಹ್ನ ಸಿಗುವ ಅಲ್ಪ ಸಮಯದಲ್ಲೇ ಹತ್ತಿಪ್ಪತ್ತು ಕ್ಷಣಗಳ ರೀಲ್ಸ್ ಮಾಡಿ ಜನರನ್ನು ನಗಿಸುತ್ತೇವೆ. ರೀಲ್ಸ್‌ಗೆ ನಿತ್ಯ ಜೀವನದಲ್ಲಿ ನಡೆಯುವ ಸಂಗತಿಗಳೇ ಸಾಕು. ಕೆಲವು ಹಿಂದಿ ವಿಡಿಯೊಗಳನ್ನೂ ನೋಡಿ ಅನುಕರಣೆ ಮಾಡುತ್ತೇವೆ. ಜೋಕ್ಸ್ ಪುಸ್ತಕಗಳಿಂದ ಕೆಲವನ್ನು ಆಯ್ದುಕೊಳ್ಳುತ್ತೇವೆ. ಒದು ಇಲ್ಲದೇ ಹೊಸ ವಿಚಾರ, ವಿಷಯಗಳು ಹುಟ್ಟುವುದಿಲ್ಲ. ನಾವೇ ಚರ್ಚೆ ಮಾಡಿ ಕಂಟೆಂಟ್ ಕ್ರಿಯೇಟ್ ಮಾಡುತ್ತೇವೆ. ಜನ ಇಷ್ಟಪಡುತ್ತಾರೆ. ಟಿಫನ್ ಸೆಂಟರ್ ಬಳಿ ಬಂದವರು ಇನ್ನೂ ಹೆಚ್ಚು ವಿಡಿಯೊ ಮಾಡಿ ಎನ್ನುತ್ತಾರೆ. ರಾಜ್ಯದ ಯಾವುದೇ ಮೂಲೆಗೆ ಹೋದರೂ ಜನ ಗುರುತಿಸುತ್ತಾರೆ' ಎಂದು ಹರ್ಷ ವ್ಯಕ್ತಪಡಿಸುತ್ತಾರೆ.



ಯಾವುದೇ ನಟನೆಯ ಹಿನ್ನೆಲೆ ಹೊಂದಿರದ ಈ ದಂಪತಿ ಶಾಲಾದಿನಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೇ ನಿರ್ಭಯವಾಗಿ ಕ್ಯಾಮೆರಾ ಎದುರಿಸಲು ಕಾರಣ ಎನ್ನುತ್ತಾರೆ. 'ಸಾಮಾಜಿಕ ಮಾಧ್ಯಮಗಳೂ ಮೊದಲಿನಂತೆ ಉಳಿದಿಲ್ಲ. ಯಾವುದೇ ಕಮೆಂಟ್‌ಗೂ ನಾವು ರಿಪ್ಲೈ ಮಾಡಲ್ಲ. ಲಾಕ್‌ಡೌನ್ ಸಮಯದಲ್ಲಿ ದಿನಕ್ಕೆ 3 ವಿಡಿಯೊಗಳನ್ನು ಮಾಡುತ್ತಿದ್ದೆವು. ಸಾಯಿಬಾಬಾ ಇಷ್ಟದ ದೇವರು. ಹೀಗಾಗಿ ಮಗನಿಗೂ ಸಾಯಿಪ್ರದ್ಯುಮ್ನ ಎಂದು ಹೆಸರಿಟ್ಟಿದ್ದೇವೆ. ಪ್ರವಾಸ ಹೆಚ್ಚು ಇಷ್ಟ. ಹೀಗಾಗಿ ವರ್ಷಕ್ಕೆರಡು ಪ್ರವಾಸ ಕಟ್ಟಿಟ್ಟಬುತ್ತಿ. ಒಂದು ಕುಟುಂಬದ ಜತೆ. ಮತ್ತೊಂದು ಸ್ನೇಹಿತರ ಜತೆ. ದೇಶ ಸುತ್ತುವುದರಿಂದಲೂ ವಿಷಯ ಸಂಗ್ರಹವಾಗುತ್ತದೆ. ಅದನ್ನೂ ನಮ್ಮ ವಿಡಿಯೊಗಳಲ್ಲಿ ಬಳಸಿಕೊಳ್ಳುತ್ತೇವೆ' ಎಂದು ಮಹಾಂತೇಶ ತಮ್ಮ ಚಟುವಟಿಕೆಗಳನ್ನು ವಿವರಿಸುತ್ತಾರೆ.

'ನಮ್ಮ ವಿಡಿಯೊಗಳ ಬಗ್ಗೆ ತಂದೆ, ತಾಯಿ, ಸ್ನೇಹಿತರಿಗೂ ಹೆಮ್ಮೆ ಇದೆ. ನಮ್ಮ ತಂದೆಯಂತೂ ರೈಲು, ಬಸ್‌ನಲ್ಲಿ ಹೋಗುವಾಗ ಯಾರದಾದರೂ ಮೊಬೈಲ್‌ನ ರೀಲ್ಸ್‌ನಲ್ಲಿ ನಮ್ಮ ವಿಡಿಯೊ ಬಂದರೆ, ನನ್ನ ಮಗ, ಸೊಸೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಟಿಫನ್ ಸೆಂಟರ್ ನಮ್ಮ ಬದುಕಿನ ಆಧಾರಸ್ತಂಭ. ಹಾಗಾಗಿ ಆ ಕೆಲಸಕ್ಕೆ ಪ್ರಾಮುಖ್ಯ ನಮ್ಮದು. ವಿಡಿಯೊಗಳೇನಿದ್ದರೂ ಜನರನ್ನು ನಗುಸುವುದಕ್ಕಾಗಿ. ಇಂದಿನ ಯುವಜನತೆ ರಾತ್ರೋರಾತ್ರಿ ಫೇಮಸ್ ಆಗಲು ಏನೇನೋ ವಿಡಿಯೊ ಮಾಡುತ್ತಾರೆ. ಬೇರೆಯವರನ್ನು ಹೀಯಾಳಿಸುವ ವಿಡಿಯೊ ಮಾಡಬಾರದು. ಅದು ವೃತ್ತಿಯಾಗಿದ್ದರೆ ಕ್ರಮಬದ್ಧವಾಗಿ ಮಾಡಿ, ಹವ್ಯಾಸವಾಗಿದ್ದರೆ ಜನರಿಗಾಗಿ ಒಳ್ಳೆಯದನ್ನು ಮಾಡಿ. ಇನ್ನೊಬ್ಬರ ತೇಜೋವಧೆ ಮಾಡಿ ಫೇಮಸ್ ಆಗುವುದು ದುರ್ಬುದ್ಧಿ' ಎನ್ನುತ್ತಾರೆ ಬುಟ್ಟೆ ದಂಪತಿ.



ಕೊಂಡಿ: ಇನ್‌ಸ್ಟಾ– Mahantesh butte
FB– Mahantesh butte (Pruthvi)
ಯ್ಯೂಟೂಬ್–@
mahanteshbutte9191